# ಮಾನಸ ಗಂಗೋತ್ರಿ

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ

ಸಂಚಿಕೆ-06 ಸಂಪುಟ-49 10 ಡಿಸೆಂಬರ್ 2020 ಒಟ್ಟು ಪುಟಗಳು-04


## ಮೃತ ನೌಕರರ ಮಕ್ಕಳಿಗೆ ಅನುಕಂಪದ ಹುದ್ದೆ

ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಜಿ ಹೇಮಂತಕುಮಾರ್ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ವಿಜ್ಞಾನ ಭವನದಲ್ಲಿ ಶಿಕ್ಷಣ ಮಂಡಳಿಯ ಎರಡನೇ ಸಾಮಾನ್ಯ ಸಭೆ ನಡೆಯಿತು.

ಮೈಸೂರು: ವಿಶ್ವವಿದ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರು ಮೃತಪಟ್ಟರೆ ಅವರ ಮಕ್ಕಳಿಗೆ ಎಫ್ಡಿಎ ಹುದ್ದೆ ನೀಡುವ ನಿಯಮ ಜಾರಿಗೆ ಶಿಕ್ಷಣ ಮಂಡಳಿಯ ಎರಡನೇ ಸಾಮಾನ್ಯ ಸಭೆಯಲ್ಲಿ ಹಲವು ಮಹತ್ವದ ನಿರ್ಣಯಗಳಿಗೆ ಅನುಮೋದನೆ ದೊರೆಯಿತು

ಮೈಸೂರು ವಿವಿಯ ನೌಕರರು ಮೃತಪಟ್ಟರೆ ಅವರ ಮಕ್ಕಳು ಎಸೆಸೆಲ್ಸಿ ಗಿಂತ ಮೇಲ್ಪಟ್ಟ ವಿದ್ಯಾರ್ಹತೆ ಹೊಂದಿದ್ದರೆ ಇವರಿಗೂ ಕಿರಿಯ ದರ್ಜೆ ಸಹಾಯಕ ಹುದ್ದೆಗಳನ್ನು ನೀಡಲಾಗುತ್ತಿತ್ತು ಎಸೆಸೆಲ್ಸಿ ಗಿಂತಲೂ ಕೆಳಗಿದ್ದರೆ ಅಟೆಂಡರ್ ಹುದ್ದೆ ತಿದ್ದುಪಡೆಯಿಂದ ಅವರ ವಿದ್ಯಾರ್ಹತೆಗೆ ತಕ್ಕಂತೆ ಅನುಕಂಪದ ಆಧಾರದ ಮೇಲೆ ಪ್ರಥಮ ದರ್ಜೆ ಸಹಾಯಕ ಹುದ್ದೆ ನೀಡಬಹುದಾಗಿದೆ ಈ ನಿಯಮವನ್ನು ಮೈವಿವಿಯಲ್ಲೂ ಜಾರಿಗೆ ತರುವುದಕ್ಕೆ ಸದಸ್ಯರು ಒಪ್ಪಿಗೆ ಸೂಚಿಸಿದರು.

# ಫೋರೆನ್ಸಿಕ್ ಸೈನ್ಸ್ ಕೋರ್ಸ್ ಪ್ರಸಕ್ತ ವರ್ಷದಿಂದ ಆರಂಭ


ಮುಂದಿನ ಶೈಕ್ಷಣಿಕ ವರ್ಷದಿಂದ ಫೋರೆನ್ಸಿಕ್ ಸೈನ್ಸ್ ಕೋರ್ಸ್ ಆರಂಭಿಸಲು ಮೈಸೂರು ವಿಶ್ವವಿದ್ಯಾನಲಯ ಶೈಕ್ಷಣಿಕ ಮಂಡಳಿ ಸಭೆಯು ನಿರ್ಧರಿಸಿದೆ

ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಸೋಮವಾರ ನಡೆದ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಬಿಎಸ್ಸಿ ಪದವಿಯಲ್ಲಿ ಫೋರೆನ್ಸಿಕ್ ಸೈನ್ಸ್ ಕೋರ್ಸ್ ವ್ಯಾಸಂಗ ಮಾಡಲು ವಿದ್ಯಾರ್ಥಿಗಳಿಂದ ಬೇಡಿಕೆ ಹೆಚ್ಚಾಗಿರುವುದರಿಂದ ಹಾಗೂ ಈ ಕೋರ್ಸಿಗೆ ಭವಿಷ್ಯದಲ್ಲಿ ಉತ್ತಮ ಅವಕಾಶಗಳು ಇರುವುದರಿಂದ ಹಲವು ವಿಜ್ಞಾನ ಕೋರ್ಸ ಹೊಂದಿರುವ ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರತ್ಯೇಕ ಫೋರೆನ್ಸಿಕ್ ಸೈನ್ಸ್ ವಿಭಾಗ ತೆರೆಯಬೇಕೆಂದು ಅಕಾಡೆಮಿಕ್ ಕೌನ್ಸಿಲ್ ಸದಸ್ಯರು ಸಲಹೆ ನೀಡಿದರು.

ಈಗಾಗಲೇ ಕಲಾ ನಿಕಾಯದ ಪದವಿಯಲ್ಲಿ ಕ್ರಿಮಿನಾಲಜಿ ಇರುವುದರಿಂದ ಮುಂದಿನ ಶೈಕ್ಷಣಿಕ ವರ್ಷದಿಂದ ಫೋರೆನ್ಸಿಕ್ ಸೈನ್ಸ್ ಕೋರ್ಸ್ ಆರಂಭಿಸಲಾಗುವುದು ಎಂದು ಮೈಸೂರು ವಿಶ್ವವಿದ್ಯಾನಲಯದ ಕುಲಪತಿ ಪ್ರೊಫೆಸರ್ ಜಿ ಹೇಮಂತ್ ಕುಮಾರ್ ಅವರು ತಿಳಿಸಿದರು, ಅದಕ್ಕಾಗಿ ಒಂದು ಉಪ ಸಮಿತಿ ರಚಿಸಿ ರೂಪುರೇಷೆ ಸಿದ್ಧಪಡಿಸಿ, ಮುಂದಿನ ಶೈಕ್ಷಣಿಕ ವರ್ಷದಿಂದ ಫೋರೆನ್ಸಿಕ್ ಸೈನ್ಸ್ ವಿಭಾಗವನ್ನು ಆರಂಭಿಸಲಾಗುವುದು ಎಂದರು.

**ಶೇ. 25**ರಷ್ಟು ಹಾಜರಾತಿ: ಅಂತಿಮ ವರ್ಷದ ಪದವಿ ಕಾಲೇಜುಗಳನ್ನು ಆರಂಭಿಸಿದರು, ಶೇಕಡ 25 ರಷ್ಟು ವಿದ್ಯಾರ್ಥಿಗಳು ಮಾತ್ರ ಹಾಜರಾಗುತ್ತಿದ್ದಾರೆ. ಬಹುತೇಕ ಮಂದಿ ಆನ್ಲೈನ್ ತರಗತಿಗಳಲ್ಲಿ ಪಾಲ್ಗೊಳ್ಳುತ್ತಿದ್ದರು ವುದರಿಂದ ರೆಗುಲರ್ ಕ್ಲಾಸ್ ನಡೆಸಿದರು ಗೈರಾಗುತ್ತಿದ್ದಾರೆ. ಈ ಬಗ್ಗೆ ಒಂದು ವಾರದೊಳಗೆ ಸರ್ಕಾರದೊಂದಿಗೆ ಸಮಾಲೋಚಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಕುಲಪತಿಗಳು ತಿಳಿಸಿದರು.

ಪೀಠ ಸ್ಥಾಪನೆಗೆ ಸಮ್ಮತಿ : ಮೈಸೂರು ವಿಶ್ವವಿದ್ಯಾನಲಯದಲ್ಲಿ ಮಂಟೇಸ್ವಾಮಿ, ಸಿದ್ದಪ್ಪಾಜಿ ಹಾಗೂ ರಾಚಪ್ಪಾಜಿ ಅವರ, ಹೆಸರಿನಲ್ಲಿ ಲೋಕ್ಕನಹಳ್ಳಿ, ಪಿಜಿ ಪಾಳ್ಯ, ಮಿಣ್ಯಂ, ಮಲೆ ಮಾದೇಶ್ವರ ಬೆಟ್ಟ, ಪೊನ್ನಾಚಿ ಹುತ್ತೂರು ಗ್ರಾಮಗಳಲ್ಲಿ ಪೀಠ ಸ್ಥಾಪನೆ ಮಾಡಲು ನಿರ್ಧರಿಸಿದೆ.



*ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಶಿಕ್ಷಣ ಮಂಡಳಿಯ ಎರಡನೇ ಸಾಮಾನ್ಯ ಸಭೆ*

### ಶಿಕ್ಷಣ ಮಂಡಳಿ ಸಭೆಯ ಪ್ರಮುಖ ನಿರ್ಧಾರಗಳು

* ಚಿನ್ನದ ಪದಕದ ಮೊತ್ತ: ದೇಣಿಗೆ ಹೆಚ್ಚಳಕ್ಕೆ ಸಮಿತಿ ರಚನೆ
* ಘಟಕ ಕಾಲೇಜಾಗಿ ಹಳ್ಳಿ ಮೈಸೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು
* ದೃಷ್ಟಿ ವಿಶ್ವಾಸಿಗರ ಸಮನ್ವಯ ಸಬಲೀಕರಣ ಕೇಂದ್ರದಲ್ಲಿ ಅಂಧರಿಗೆ ಮೀಸಲಾತಿ
* ಸ್ಮಾರ್ಟ್ ವಿಲೇಜ್ ಆದಿವಾಸಿಗಳಿಗೆ ಎರಡು ಸ್ಥಾನ ಮೀಸಲು
* ಹೊಸ ಕಾಲೇಜು ಆರಂಭಕ್ಕೆ ಅನುಮತಿ
* ಡೆಪ್ಯೂಟಿ ರಿಜಿಸ್ಟರ್ ಹುದ್ದೆಯಲ್ಲಿ ಮಹಿಳಾ ಮೀಸಲು
* ಪಿ ಎಚ್ ಡಿ ನಿಯಮಾವಳಿ 2017ರ ಮಾರ್ಪಾಡಿಗೆ ಅನುಮೋದನೆ
* 2019 -20 ನೇ ಸಾಲಿನ ವಾರ್ಷಿಕ ವರಮಾನಸರ್ಕಾರಕ್ಕೆ ಸಲ್ಲಿಕೆ
* ಹೊಸ ವಿಶೇಷ ಕೋರ್ಸ್ ಆರಂಭಕ್ಕೆ ಅನುಮತಿ
* 40ಕ್ಕೂ ಹೆಚ್ಚು ಸಮಿತಿ ರಚನೆಗೆ ಅನುಮೋಧನೆ.

## ಅಂಬೇಡ್ಕರ್, ಬುದ್ದರ ಪ್ರತಿಮೆಗೆ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಮಾಲಾರ್ಪಣೆ.



*ಬುದ್ಧ ಮತ್ತು ಅಂಬೇಡ್ಕರ್ ಪ್ರತಿಮೆಗಳಿಗೆ ಮೈಸೂರು ವಿವಿಯ ಕುಲಪತಿ ಪ್ರೊ ಜಿ ಹೇಮಂತ್ ಕುಮಾರ್ ಅವರು ಪುಷ್ಪಾರ್ಚನೆ ಮಾಡಿದರು. ಕಾರ್ಯ ಕ್ರಮದಲ್ಲಿ ಕುಲ ಸಚಿವರಾದ ಆರ್ ಶಿವಪ್ಪ , ಶಿಕ್ಷಕ ವೃಂದದವರು ಭಾಗಿಯಾಗಿದ್ದರು.*

ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ 64ನೇ ವರ್ಷದ ಮಹಾಪರಿನಿರ್ವಾಣ ಕಾರ್ಯಕ್ರಮಕ್ಕೆ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಬುದ್ದರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಚಾಲನೆ ನೀಡಿದರು. ಮೈಸೂರು ವಿಶ್ವವಿದ್ಯಾನಿಲಯದ ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ ಮತ್ತು ಸರ್ಕಾರಿ ಬಾಲಕಿಯರ ಬಾಲ ಮಂದಿರ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ 64ನೇ ವರ್ಷದ ಮಹಾಪರಿನಿರ್ವಾಣ ದಿನದ ಅಂಗವಾಗಿ "ವಾರ್ತಾ ಮತ್ತು ಸಾರ್ವಜನಕ ಸಂಪರ್ಕ ಇಲಾಖೆ ನಿರ್ಮಾಣದ ಭಾರತ ಭಾಗ್ಯ ವಿಧಾತ ರೂಪಕ ಪ್ರದರ್ಶನ ಹಾಗೂ ಸಂವಾದ ಕಾರ್ಯಕ್ರಮ" ಕ್ಕೆ ಮೊದಲ ಹಂತದಲ್ಲಿ ಮಾನಸಗಂಗೋತ್ರಿ ಆವರಣದಲ್ಲಿರುವ ಅಂಬೇಡ್ಕರ್ ಹಾಗೂ ಬುದ್ಧ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿ ಕುಲಪತಿ ಪ್ರೊ.ಜಿ .ಹೇಮಂತ್ ಕುಮಾರ್ ಚಾಲನೆ ನೀಡಿದರು. ಈ ಸಂದರ್ಭ ಮೈಸೂರು ವಿವಿ ಕುಲಸಚಿವ ಪ್ರೊ.ಆರ್.ಶಿವಪ್ಪ, ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಮಹದೇವನ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ದೃಷ್ಟಿ ದೋಷವುಳ್ಳ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕಾಗಿ ಸಬಲೀಕರಣ ಕೇಂದ್ರ ಸ್ಥಾಪನೆ

ದೃಷ್ಟಿ ದೋಷವುಳ್ಳ ವಿದ್ಯಾರ್ಥಿಗಳ ಉನ್ನತ ಶಿಕ್ಷಣ ಅನುಕೂಲವಾಗುವಂತೆ ಮೈಸೂರು ವಿಶ್ವವಿದ್ಯಾನಿಲಯವು ದೃಷ್ಟಿ ವಿಶ್ವಾಸಿಗರ ಸಮನ್ವಯ ಸಬಲೀಕರಣ ಕೇಂದ್ರವನ್ನು ಸ್ಥಾಪಿಸಲು ಶೈಕ್ಷಣಿಕ ಮಂಡಳಿ ಒಪ್ಪಿಗೆ ಸೂಚಿಸಿದೆ. ದೃಷ್ಟಿ ದೋಷವುಳ್ಳ ವಿದ್ಯಾರ್ಥಿಗಳು ಉನ್ನತ ಮೈಸೂರು ವಿವಿ ನಿರ್ಣಯ ಶಿಕ್ಷಣ ಮಾಡಲು ಅವಕಾಶ ನೀಡಿ ಅವರ ಸಬಲೀಕರಣ ಮಾಡಲು ಸರ್ಕಾರವು ವಿವಿಗಳಲ್ಲಿ ಪ್ರತ್ಯೇಕ ಕೇಂದ್ರ ಸ್ಥಾಪಿಸಬೇಕೆಂದು ಆದೇಶಿಸಿರುವುದರಿಂದ ನ. 13ರಂದು ನಡೆದ

**ಚಿನ್ನದ ಪದಕ ದತ್ತಿ:** ಬೆಂಗಳೂರಿನ ಕುಮಾರಸ್ವಾಮಿ ಲೇಔಟ್ ನ ಡಾಕ್ಟರ್ಸ್ ಗುರುಮೂರ್ತಿ ಅವರ ಮನವಿ ಮೇರೆಗೆ ಶ್ರೀರಾಮುಲು ಯಶೋದಮ್ಮ ಅವರ ಸ್ಮರಣಾರ್ಥ ಎರಡು ಚಿನ್ನದ ಪದಕ ದತ್ತಿ ಸ್ಥಾಪಿಸಲು ಹಿಂದಿನ ಸಭೆಯು ಒಪ್ಪಿಗೆ ಸೂಚಿಸಿದೆ,

**ಘಟಕ ಕಾಲೇಜು:** ಹಾಸನ ಜಿಲ್ಲೆ, ಹೊಳೆನರಸೀಪುರ ತಾಲೂಕಿನ ಹಳ್ಳಿ ಮೈಸೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಮೈಸೂರು ವಿಶ್ವವಿದ್ಯಾಲಯದ ಘಟಕ ಕಾಲೇಜುನ್ನಾಗಿ ಆರಂಭಿಸಲು ಸಭೆಯು ಸಮ್ಮತಿಸಿದೆ,



ಅಧಿನಿಯಮ ರಚನಾ ಸಮಿತಿ ಸಭೆಯಲ್ಲಿ ದೃಷ್ಟಿ ವಿಶ್ವಸಿಗರು ಸಮನ್ವಯ ಸಬಲೀಕರಣ ಕೇಂದ್ರ ಸ್ಥಾಪಿಸುವ ಸಂಬಂಧ ಕರಡು ಅದಿನಿಯಮ ಸಿದ್ದಪಡಿಸಿರುವುದಕ್ಕೆ ಇಂದಿನ ಶೈಕ್ಷಣಿಕ ಮಂಡಳಿ ಸಭೆಯು ಅನುಮೋದಿಸಿತು,

ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಜಿ ಹೇಮಂತಕುಮಾರ್ ಅವರ ಅಧ್ಯಕ್ಷತೆಯಲ್ಲಿ ' ವಿಜ್ಞಾನ ಭವನದಲ್ಲಿ ಶಿಕ್ಷಣ ಮಂಡಳಿಯ ಎರಡನೇ ಸಾಮಾನ್ಯ ಸಭೆ ನಡೆಯಿತು.

## ಸಂಪಾದಕೀಯ

### ಎಂಜಿನಿಯರಿಂಗ್ ಕಲಿತವರನ್ನು ಶಿಕ್ಷಕ ಹುದ್ದೆಗೆ ನೇಮಿಸುವ ಕುರಿತು ಅವಸರ ಬೇಡ, ಚರ್ಚೆ ಅಗತ್ಯ

ಪ್ರಾಥಮಿಕ ಶಾಲೆಗಳ ಪದವೀಧರ ಶಿಕ್ಷಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಎಂಜಿನಿಯರಿಂಗ್ ಪದವೀಧರರಿಗೆ ಅವಕಾಶ ಕಲ್ಪಿಸಲು ರಾಜ್ಯ ಸರ್ಕಾರವು ಮುಂದಾಗಿದೆ. ಈ ಸಂಬಂಧವಾಗಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲು ರಾಜ್ಯ ಸಚಿವ ಸಂಪುಟ ಸಭೆಯು ಒಪ್ಪಿಗೆ ನೀಡಿದೆ. ಶಾಲಾ ಶಿಕ್ಷಣದಲ್ಲಿ ವಿಜ್ಞಾನ ಮತ್ತು ಗಣಿತ ವಿಷಯಗಳ ಬೋಧನಾ ಗುಣಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸರ್ಕಾರ ಹೇಳಿದೆ. ವಿಜ್ಞಾನ ಮತ್ತು ಗಣಿತ ಶಿಕ್ಷಕರ ಹುದ್ದೆಗಳಿಗೆ ಗುಣಮಟ್ಟದ ಶಿಕ್ಷಕರು ಸಿಗದೇ ಇರುವುದರಿಂದಾಗಿ, ಆ ವಿಷಯಗಳನ್ನು ಬೋಧಿಸಲು ಎಂಜಿನಿಯರಿಂಗ್ ಪದವೀಧರರಿಗೆ ಅವಕಾಶ ನೀಡಬಹುದು ಎಂಬ ತಜ್ಞರ ಸಮಿತಿಯ ಅಭಿಪ್ರಾಯದ ಮೇಲೆ ನಿಯಮಗಳ ತಿದ್ದುಪಡಿಗೆ ಸರ್ಕಾರ ಮುಂದಾಗಿದೆ. ಎಂಜಿನಿಯರಿಂಗ್ ಪದವೀಧರರನ್ನು ಪ್ರಾಥಮಿಕ ಶಾಲಾ ಶಿಕ್ಷಕ ಹುದ್ದೆಗಳಿಗೆ ನೇಮಿಸುವ ಸರ್ಕಾರದ ಚಿಂತನೆಯು ಮೇಲ್ನೋಟಕ್ಕೆ ಆಕರ್ಷಕವಾಗಿದ್ದರೂ ಅದು ಎಷ್ಟರಮಟ್ಟಿಗೆ ಪ್ರಾಯೋಗಿಕ ಎನ್ನುವುದರ ಬಗ್ಗೆ ವ್ಯಾಪಕ ಚರ್ಚೆ ನಡೆಯಬೇಕಾಗಿದೆ. ಬಿ.ಎಸ್ಸಿ. ಮತ್ತು ಎಂಜಿನಿಯರಿಂಗ್ ಪದವಿಗಳ ಸ್ವರೂಪ ಭಿನ್ನವಾದುದು. ವೃತ್ತಿಪರ ಶಿಕ್ಷಣವೇ ಎಂಜಿನಿಯರಿಂಗ್ ಕೋರ್ಸ್‌ನ ಪ್ರಧಾನ ಉದ್ದೇಶ. ಬಿ.ಎಸ್ಸಿಯು ಜ್ಞಾನಶಿಸ್ತು ಕೋರ್ಸ್. ಹಾಗಾಗಿ, ತಾಂತ್ರಿಕ ವೃತ್ತಿಪರ ಪದವಿ ಪಡೆದವರನ್ನು ಏಕಾಏಕಿ ಶಾಲಾ ಬೋಧಕರಾಗಿ ನೇಮಿಸಿಕೊಳ್ಳುವುದರ ಬಗ್ಗೆ ಅವಸರದ ತೀರ್ಮಾನ ಸಲ್ಲದು. . ಪದವಿ ಹಂತದಲ್ಲಿ ಬಹುತೇಕ ವಿದ್ಯಾರ್ಥಿಗಳ ಆಯ್ಕೆಯು ಕಾಮರ್ಸ್ ಕೋರ್ಸ್‌ಗಳೇ ಆಗಿರುವುದರಿಂದ, ವಿಜ್ಞಾನವನ್ನು ಮುಖ್ಯ ವಿಷಯವನ್ನಾಗಿ ಕಲಿತ ಅಭ್ಯರ್ಥಿಗಳ ಕೊರತೆ ಕಂಡುಬರುವುದು ಸಹಜ. ಈ ಕೊರತೆಯನ್ನು ತುಂಬಲಿಕ್ಕಾಗಿ ಎಂಜಿನುಯರಿಂಗ್ ಕಲಿತವರನ್ನು ಬಳಸಿಕೊಳ್ಳುವ ಪ್ರಯತ್ನವು ತಾತ್ಕಾಲಿಕ ಪರಿಹಾರವಾಗಬಲ್ಲದೇ ವಿನಾ ಸಮಸ್ಯೆಗೆ ಶಾಶ್ವತ ಪರಿಹಾರವಲ್ಲ. ಎಂಜಿನಿಯರಿಂಗ್ ಪದವೀಧರರಿಗೆ ಶಿಕ್ಷಕರಾಗಲು ಅವಕಾಶ ಕಲ್ಪಿಸುವುದರಿಂದ ಬಿ.ಎಸ್ಸಿ. ಕೋರ್ಸ್‌ಗಳು ಮತ್ತಷ್ಟು ಸೊರಗಲು ಸರ್ಕಾರವೇ ಅವಕಾಶ ಕಲ್ಪಿಸಿದಂತಾಗುತ್ತದೆ. ಎಂಜಿನಿಯರಿಂಗ್ ಕಲಿತವರು ಶಾಲಾ ಮಕ್ಕಳಿಗೆ ಗಣಿತ ಅಥವಾ ವಿಜ್ಞಾನವನ್ನು ಉತ್ತಮವಾಗಿ ಬೋಧಿಸಬಲ್ಲರು ಎಂಬುದಕ್ಕೆ ಪುರಾವೆಗಳು ಇದ್ದಂತಿಲ್ಲ. ಅಲ್ಲಿ ಸಲ್ಲದ ಅಭ್ಯರ್ಥಿಗಳೇ ಶಿಕ್ಷಣ ಕ್ಷೇತ್ರಕ್ಕೆ ಗತಿ ಎನ್ನುವಂತಾಗಬಹುದು. ಇದು ಶಿಕ್ಷಣ ಕ್ಷೇತ್ರದ ಹಿತಾಸಕ್ತಿಗೆ ಪೂರಕವಾದುದೇನಲ್ಲ.

# ದಾಸ ಪರಂಪರೆಯ ಶ್ರೇಷ್ಠರು ಕನಕ ದಾಸರು

*ತಾಯಿ ತಂದೆಯ ಬಿಟ್ಟು*
*ತಪವ ಮಾಡಲುಬಹುದು*
*ದಾಯಾದಿ ಬಂಧುಗಳ ಬಿಡಲುಬಹುದು*
*ರಾಯ ತಾ ಮುನಿದರೆ*
*ರಾಜ್ಯವನೆ ಬಿಡಬಹುದು*
*ಕಾಯಜಾ ಪಿತನಿನ್ನ ಅಡಿಯ ಬಿಡಲಾಗದು..*

ಕನಕದಾಸರು (1509–1609) ಕರ್ನಾಟಕದಲ್ಲಿ 15 –16ನೇ ಶತಮಾನದಲ್ಲಿ ಜನಪ್ರಿಯವಾದ ಭಕ್ತಿ ಪಂಥದ ಹರಿದಾಸರಲ್ಲಿ ಒಬ್ಬರು. ಹಾಗೆಯೇ ಕನ್ನಡ ಪಾಳೆಯ ಪ್ರಸಿದ್ಧ ಕವಿಗಳು, ಮತ್ತು ಕರ್ನಾಟಕ ಸಂಗೀತದಲ್ಲಿ ಮೂಲಭೂತ ಸಿದ್ಧಾಂತಗಳಿಗೆ ಕಾಣಿಕೆಯನತ್ತವರು.

ಕನಕದಾಸರು ದಂಡನಾಯಕ ನಾಗಿದ್ದು ಯಾವುದೋ ಯುದ್ಧದಲ್ಲಿ ಸೋತ ಅವರಿಗೆ ಉಪರತಿ ಉಂಟಾಗಿ ಹರಿಭಕ್ತರಾದರಂತೆ. ಕನಕದಾಸರ ಊರು ಕಾಗಿನೆಲೆಯ ( ಈಗ ಹಾವೇರಿ ಜಿಲ್ಲೆಯಲ್ಲಿದೆ). ಕನಕದಾಸರ ಕೀರ್ತನೆಗಳು ಕಾಗಿನೆಲೆಯ ಕೇಶವನಿಗೆ ಅರ್ಪಿತವಾಗಿರುವುದನ್ನು ಗಮನಿಸಬಹುದು. ಆದಿಕೇಶವನ ಭಕ್ತರಾದ ಕನಕದಾಸರು ಜಾತಿಪದ್ಧತಿಯ ತಾರತಮ್ಯಗಳನ್ನು ಅಲ್ಲಗಳೆದರು. ಇವರು ವ್ಯಾಸರಾಯರ ಮೆಚ್ಚಿನ ಶಿಷ್ಯರು. ವ್ಯಾಸರಾಯರಿಂದ ಮಧ್ವ ತತ್ವಶಾಸ್ತ್ರವನ್ನು ಕಲಿತು ಒಪ್ಪಿಕೊಂಡ ಕನಕದಾಸರು ಉಡುಪಿ ಶ್ರೀ ಕೃಷ್ಣನ ಭಕ್ತರಾದರು ಕೀರ್ತನೆಗಳು ಮತ್ತು ಕಾವ್ಯಗಳು ಎರಡನ್ನೂ ರಚಿಸಿದ ಕೆಲವೇ ಕೆಲವು ಹರಿದಾಸರಲ್ಲಿ ಕನಕದಾಸರು ಒಬ್ಬರೆಂಬ ಸಂಗತಿಯಾಗಿದೆ. ಆ ಕಾಲದ ಸಾಹಿತ್ಯ ಸಂದರ್ಭದಲ್ಲಿ ಕನಕದಾಸರಿಗೆ ವಿಶಿಷ್ಟವಾದ ಹಿನ್ನೆಲೆಯಿತ್ತು. ಅವರು ಸಾಮಂತರಾಜ ಅಥವಾ ಪಾಳೆಯಗಾರರೋ ಆಗಿದ್ದುದರಿಂದ ಅವರಿಗೆ ಯುದ್ಧ ಮತ್ತು ಆಡಳಿತಗಳ ನೇರವಾದ ಅನುಭವವಿತ್ತು. .ಅವರು ಕರ್ನಾಟಕ ಹಾಗೂ ಮಹಾರಾಷ್ಟ್ರಗಳಲ್ಲಿ ಮಾಡಿದ ನಿರಂತರವಾದ ತಿರುಗಾಟಗಳು ಮತ್ತು ಧಾರ್ಮಿಕ



ಮುಖಂಡ ರೊಂದಿಗಿನ ಅವರ ಮುಖಾ ಮುಖಿಗಳು ಸಾಹಸ–ವಿಷಾದಗಳಿಂದ ಕೂಡಿದೆ ಅವರ ಭಾವಗೀತೆಯಂತಹ ಕೀರ್ತನೆಗಳಲ್ಲಿ ಬಹಳ ಸಮರ್ಥವಾದ ಅಭಿವ್ಯಕ್ತಿಯನ್ನು ಪಡೆದಿವೆ. ಕನಕದಾಸರ ಹಿರಿಯ ಸಮಕಾಲೀನರಾದ ವ್ಯಾಸರಾಯರು, ಪುರಂದರದಾಸರು ಮುಂತಾದವರು ಅವರ ಭಕ್ತಿ ಮತ್ತು ಪ್ರತಿಭೆಗಳನ್ನು ಮೆಚ್ಚಿ ಕೊಂಡಾಡಿದ್ದಾರೆ.

ಅವರು ಶ್ರೀವೈಷ್ಣವ ಸಿದ್ಧಾಂತವನ್ನು ಇಷ್ಟಪಟ್ಟು ದ್ವೈತ ತಾತ್ವಿಕತೆಯ ಮೂಲ ನೆಲೆಗಳಲ್ಲಿ ಕೀರ್ತನೆಗಳ ರಚಿಸಿದರು. ಅವರು ಅಂತರಂಗದ ಭಾವನೆಗಳಿಗೆ ಕಟ್ಟುಪಾಡಿಲ್ಲದೆ, ನುಡಿಗೊಡುವ ಅನೇಕ ಕೀರ್ತನೆಗಳನ್ನು ಹಾಡಿದ್ದಾರೆ.

ಕನಕದಾಸರು ಸಾಹಿತ್ಯದ ವಿವಿಧ ಪ್ರಕಾರಗಳಾದ ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳು ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸಿರುವುದಲ್ಲದೆ, ಸಂಗೀತ ಪ್ರಪಂಚಕ್ಕೆ ತನ್ನದೇ ಆದಂತಹ ಕೊಡುಗೆಯನ್ನು ಮುಂಡಿಗೆಗಳ ರೂಪದಲ್ಲಿ ನೀಡಿದ್ದಾರೆ. ಸುಮಾರು 316 ಕೀರ್ತನೆಗಳು ಹಾಗೂ ಇನ್ನಿತರ ಸಾಹಿತ್ಯ ಮಾತ್ರ ಲಭ್ಯವಾಗಿರುವುದನ್ನು ಕಾಣಬಹುದು.

ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿರುವ 'ನಳಚರಿತೆ' ಕನ್ನಡದ ಜನಪ್ರಿಯ ಕಾವ್ಯಗಳಲ್ಲಿ ಒಂದು. ಇದರಲ್ಲಿ ಒಂಬತ್ತು ಅಧ್ಯಾಯಗಳಿದ್ದು ಅವು ಸುಮಾರು 480 ಪದ್ಯಗಳನ್ನು ಒಳಗೊಂಡಿವೆ. ಒಂದು ನೆಲೆಯಲ್ಲಿ ಇದು ನಿಜವಾದ ಪ್ರೇಮಿಗಳು ಎದುರಿಸುವ ಪರಿಪಾಟಲುಗಳನ್ನು ನಿರೂಪಿಸುವುದು ಈ ದಂಪತಿಗಳು ಎದುರಿಸಿದ ಕಾಡು ಮತ್ತು ಕಾಳ್ಗಿಚ್ಚುಗಳ ವರ್ಣನೆಯು ಬಹಳ ಸಹಜವಾಗಿದೆ.


ಮೋಹನತರಂಗಿಣಿ ಸಾಂಗತ್ಯವೆಂಬ ಚಂದು ಪ್ರಕಾರವನ್ನು ಬಳಸಿಕೊಂಡಿರುವ ದೊಡ್ಡಗಾತ್ರದ ಕಾವ್ಯ. ಈ ಕಾವ್ಯವು ಕೃಷ್ಣನ ಮೊಮ್ಮಗನಾದ ಅನಿರುದ್ಧ ಮತ್ತು ಬಾಣಾಸುರನ ಮಗಳಾದ ಹುಷಾರ ಪ್ರಣಯ ಕಥೆಯನ್ನು ವಸ್ತುವಾಗಿ ಹೊಂದಿದೆ.

ಕನಕ ಮುಂಡಿಗೆಗಳು ಒಗ್ಗಟ್ಟಿನ ಹೊರ ಆವರಣದೊಳಗೆ, ಮಹತ್ವದ ತಾತ್ವಿಕ ಸಂಗತಿಗಳನ್ನು ಹೊಂದಿರುವ, ಚಿಕ್ಕ ಕವಿತೆಗಳನ್ನು ಒಳಗೊಳ್ಳುತ್ತವೆ. ಇವುಗಳನ್ನು ಅರ್ಥ ಮಾಡಿಕೊಳ್ಳುವ–ತಾಂತ್ರಿಕವಾದ ಪರಿಭಾಷೆಯ ನಿಕಟ ಪರಿಚಯ ಇರಬೇಕು. ಹರಿಭಕ್ತಸಾರದಲ್ಲಿ ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿರುವ 110 ಪದ್ಯಗಳಿವೆ.

ಒಟ್ಟಿನಲ್ಲಿ ಹೇಳುವುದಾದರೆ, ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಕನಕದಾಸರಿಗೆ ವಿಶಿಷ್ಟವಾದ ಸ್ಥಾನ ಮತ್ತು ಗೌರವವಿದೆ.

# ಮಣ್ಣಿನ ಆರೋಗ್ಯ ನಮ್ಮ ಹೊಣೆ

ಮನುಷ್ಯನ ಬದುಕು ನಿಂತಿರುವುದೇ ಮಣ್ಣಿನ ಮೇಲೆ. ಪ್ರತಿ ಮನಷ್ಯನ ಆಹಾರದ ಅಗತ್ಯವನ್ನು ನೀಗಿಸುತ್ತಿರುವದು ಮಣ್ಣು. ಹೌದು, ಈ ಮಣ್ಣು ಮನುಷ್ಯನ ಬದುಕಿನಲ್ಲಿ ವಹಿಸಿದ ಮಹತ್ವದ ಪಾತ್ರವನ್ನು ಮನಗೊಂಡು, ಅದರ ರಕ್ಷಣೆಗೆ ಪಣ ತೊಡುವ ಉದ್ದೇಶದಿಂದ ಪ್ರತಿ ವರ್ಷ ಡಿಸೆಂಬರ್ 5 ಅನ್ನು"ವಿಶ್ವ ಮಣ್ಣಿನ ದಿನ "ಎಂದು ಆಚರಿಸಲಾಗುತ್ತದೆ.



ವಿಶ್ವ ಮಣ್ಣಿನ ದಿನಾಚರಣೆಯನ್ನು ಪ್ರತಿ ವರ್ಷ ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಘಟನೆಯು ಆಚರಿಸುತ್ತದೆ. ಇದರ ಕೇಂದ್ರ ಕಚೇರಿ ರೋಮ್ ನಲ್ಲಿದ್ದೆ. 2014ರ ಡಿಸೆಂಬರ್ 5ರಂದು ಮೊದಲ ಬಾರಿಗೆ ಅಧಿಕೃತವಾಗಿ ಅಂತರಾಷ್ಟ್ರೀಯ ಮಣ್ಣಿನ ದಿನವನ್ನು ಆಚರಿಸಲಾಯಿತು.

ವಿಶ್ವ ಮಣ್ಣಿನ ದಿನದಂದು ನಡೆಸುವ ಚಟುವಟಿಕೆಗಳು ಆಹಾರ ಭದ್ರತೆ, ಆರೋಗ್ಯಕರ ಪರಿಸರ ವ್ಯವಸ್ಥೆಗಳು ಮತ್ತು ಮಾನವನ ಯೋಗಕ್ಷೇಮಕ್ಕೆ ಮಣ್ಣಿನ ಗುಣಮಟ್ಟದ ಮಹತ್ವದ ಬಗ್ಗೆ ಸಂದೇಶಗಳನ್ನು ಸಂವಹಿಸುವ ಗುರಿಯನ್ನು ಹೊಂದಿದೆ. ಮಣ್ಣು ಭೂಮಿಯ ಮೇಲಿನ ಪದರವಾಗಿದ್ದು, ಸಾವಯವ ಮತ್ತು ಅಜೈವಿಕ ವಸ್ತುಗಳ ಮಿಶ್ರಣವಾಗಿದೆ, ಇದರಲ್ಲಿ ಸಸ್ಯಗಳು ಬೆಳೆಯುತ್ತವೆ. ಇದು ಸೀಮಿತ ನೈಸರ್ಗಿಕ ಸಂಪನ್ಮೂಲವಾಗಿದೆ. ಮಾನವನ ಸಮಯದ ಪ್ರಮಾಣದಲ್ಲಿ ಅದು ನವೀಕರಿಸಲಾಗುವುದಿಲ್ಲ. ಅನುಚಿತ ನಿರ್ವಹಣಾ ಪದ್ಧತಿಗಳು ಕಾರಣದಿಂದಾಗಿ ಮಣ್ಣಿನ ಸಂಪನ್ಮೂಲಗಳ ಅವನತಿ ವಿಶ್ವದ್ಯಾಂತ ಹೆಚ್ಚಳವಾಗಿದೆ, ಜನಸಂಖ್ಯೆಯ ಒತ್ತಡ ಮತ್ತು ಅಗತ್ಯ ಸಂಪನ್ಮೂಲದ ಮೇಲೆ ಅಸಮರ್ಪಕ ಆಡಳಿತವನ್ನು ಹೊಂದಿದೆ. ಜಗತ್ತಿನ ಶೇ 95ರಷ್ಟು ಆಹಾರ ಪದಾರ್ಥ ಸಿಕ್ಕುವುದು ಮಣ್ಣಿನಿಂದ. ಈಗಾಗಲೇ ಶೇ 33ರಷ್ಟು ಮಣ್ಣು ತನ್ನ ಫಲವತ್ತತೆಯನ್ನು ಕಳೆದುಕೊಂಡಿದೆ ಎಂದು ವರದಿಗಳು ಹೇಳುತ್ತವೆ. ಅಂದರೆ ಉಳಿದ ಮಣ್ಣನ್ನು ರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯ, ವಿಶ್ವದಾದ್ಯಂತ ಬೇರೆ ಬೇರೆ ಸ್ಥಳಗಳಲ್ಲಿ ಮಣ್ಣಿನ ಕಾಳಜಿಯ ಕುರಿತು ಕಾರ್ಯಗಾರ, ಉಪನ್ಯಾಸ, ತರಬೇತಿ ನೀಡಿ ಈ ದಿನವನ್ನು ಆಚರಿಸಲಾಗುತ್ತದೆ. ಇಂದಿನ ಮಾಲಿನ್ಯದ ಯುಗದಲ್ಲಿ ಮಣ್ಣನ್ನು ಉಳಿಸಿಕೊಳ್ಳುವುದು ಒಂದು ಸವಾಲೇ ಸರಿ. ಆದರೆ ಮನುಕುಲದ ಭವಿಷ್ಯದ ದೃಷ್ಟಿಯಿಂದ ಇಂದಿನಿಂದಲೇ ಮಣ್ಣಿನ ಮೇಲೆ ಮತ್ತಷ್ಟು ಕಾಳಜಿ ಮೂಡಲಿ ಹಾಗೆ ಪ್ರಮುಖ್ಯತೆ ಮೂಡಲಿ –ಎಂಬ ಹಾರೈಕೆ'ವಿಶ್ವ ಮಣ್ಣಿನ ದಿನ'ದ್ದು.

## ಓದುಗರ ಪತ್ರ

### ಗ್ರಂಥಾಲಯ ಆರಂಭಿಸಲು ಮನವಿ

ಮೈಸೂರು ವಿವಿಯ ಕಾಲೇಜುಗಳು ನವೆಂಬರ್ 17ರಿಂದ ಆರಂಭವಾಗಿದ್ದು. ವಿದ್ಯಾರ್ಥಿಗಳು ಕೋರೋನ ಕೊಂಕಿನ ಭಯದಿಂದ ಕೊಂಚ ಸುಧಾರಿಸಿಕೊಂಡು ಕಾಲೇಜಿನತ್ತ ಮುಖ ಮಾಡಿದ್ದಾರೆ. ಆದರೆ ಸಂಭಂದಪಟ್ಟ ಪಠ್ಯ ಕ್ರಮಗಳ ಪುಸ್ತಕಗಳ ಅಭಾವ ಉಂಟಾಗಿದೆ. ಈ ಕಾರಣವಾಗಿ ಸೂಕ್ತ ಮುನ್ನೆಚ್ಚರಿಕೆಯೊಂದಿಗೆ ಗ್ರಂಥಾಲಯ ತೆರೆದು ವಿಧ್ಯಾರ್ಥಿಗಳ ಶೈಕ್ಷಣಿಕ ಕಲಿಕೆಗೆ ಸಹಕರಿಸಬೇಕು. ಈ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕಾಗಿ ಕೋರುವ.

ಸಹನಾ ಸಿ ವಿ. ವಿದ್ಯಾರ್ಥಿನಿ **ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಮಾನಸಗೊಂಗೋತ್ರಿ.**

### ಶೌಚಾಲಯ ಮತ್ತು ತರಗತಿ ಕೊಠಡಿಗಳುನ್ನು ಶುಚಿಗೊಳಿಸಿ

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮದ ಎಲ್ಲ ವಿದ್ಯಾರ್ಥಿಗಳ ಪರವಾಗಿ, ಕಾಲೇಜಿನ ಶೌಚಾಲಯಗಳ ನೈರ್ಮಲ್ಯದ ಪರಿಸ್ಥಿತಿಗಳನ್ನು ನಮ್ಮ ಗಮನಕ್ಕೆ ತರಲು ನಾನು ಬಯಸುತ್ತೇನೆ. ಕಾಲೇಜಿನ ಶೌಚಾಲಯಗಳು ಕೆಟ್ಟದಾಗಿ ದುರ್ವಾಸನೆ ಬೀರುತ್ತವೆ. ಫ್ಲಶಿಂಗ್ ವ್ಯವಸ್ಥೆಯು ಕ್ರಮಬದ್ಧವಾಗಿ ಉಳಿದಿಲ್ಲ. ಕೊಠಡಿಗಳು ಸಹ ಧೂಳು ಮತ್ತು ಕೊಳಕಾಗಿವೆ. ಅದು ವಾಕರಿಕೆ ಉಂಟುಮಾಡುತ್ತಿದೆ.' ತರಗತಿಯ ಸ್ಥಿತಿ ಹೆಚ್ಚು ಉತ್ತಮವಾಗಿಲ್ಲ. ಅವುಗಳನ್ನು ಪ್ರತಿದಿನ ಗುಡಿಸಿ ಅಥವಾ ಸ್ವಚ್ಛಗೊಳಿಸುವುದಿಲ್ಲ. ಧೂಳು ಮತ್ತು ಕೊಳೆಯ ಬೆಂಚುಗಳು ಮತ್ತು ಮೇಜುಗಳ ಮೇಲೆ ಹರಡಿರುತ್ತದೆ. ಮತ್ತು ಯಾವುದೇ ನೈರ್ಮಲ್ಯ ಕರವಸ್ತ್ರ ದಹನಕಾರಕ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಆದ್ದರಿಂದ ದಯವಿಟ್ಟು ಅದನ್ನು ನೋಡಿಕೊಳ್ಳಿ. ಮುಂದಿನ ದಿನಗಳಲ್ಲಿ ಆದರೂ ಪರಿಸ್ಥಿತಿಯನ್ನು ಸುಧಾರಿಸಲು ನೀವು ಕೆಲವು ತ್ವರಿತ ಕ್ರಮಗಳನ್ನು ತೆಗೆದುಕೊಳ್ಳುವಿರಿ ಎಂದು ನಾನು ಭಾವಿಸುತ್ತೇನೆ.

ಸ್ವರ್ಣ ಕಿತ್ತೂರು. ವಿದ್ಯಾರ್ಥಿನಿ **ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ** ಮಾನಸಗೊಂಗೋತ್ರಿ.

# ರಾಷ್ಟ್ರೀಯ ಯೋಜನೆ ಆಗಲಿದೆ ಭದ್ರಾ ಮೇಲ್ದಂಡೆ

**ಮ**ಧ್ಯಕರ್ನಾಟಕದ ಬಯಲು ಸೀಮೆಗೆ ನೀರುಣಿಸುವ ಭದ್ರಾ ಮೇಲ್ದಂಡೆ ಯೋಜನೆ ರಾಷ್ಟ್ರೀಯ ನೀರಾವರಿ ಯೋಜನೆಯಾಗಿ ರೂಪುಗೊಳ್ಳುವ ಕಾಲ ಸನ್ನಿತವಾಗಿದೆ. ರಾಜ್ಯ ಜಲಸಂಪನ್ಮೂಲ ಇಲಾಖೆ ಸಿದ್ದಪಡಿಸಿದ ವರದಿಗೆ "ವಿಶ್ವೇಶ್ವರಯ್ಯ ಜಲ ನಿಗಮದ ಆಡಳಿತ ಮಂಡಳಿ ಒಪ್ಪಿಗೆ ನೀಡಿದೆ. ತಾತ್ವಿಕ ಭರವಸೆ ನೀಡಿರುವ ಕೇಂದ್ರ ಸರ್ಕಾರದ ಅಧಿಕೃತ ಅನುಮೋದನೆಯಷ್ಟೇ ಬಾಕಿ ಇದೆ.

### ಏನಿದು ಯೋಜನೆ?

ಭದ್ರಾ ಜಲಾಶಯದಿಂದ ಬಯಲುಸೀಮೆಗೆ ನೀರಾವರಿ ಸೌಲಭ್ಯ ಕಲ್ಪಿಸುವುದು ಯೋಜನೆಯ ಉದ್ದೇಶ. ಹೆಸರು ಭದ್ರಾ ಮೇಲ್ದಂಡೆ ಎಂದಿದ್ದರೂ ತುಂಗಾ ನದಿಯ ನೀರಿನ ಪಾಲು ಹೆಚ್ಚಿದೆ. ಯಾವುದೇ ಅಣೆಕಟ್ಟು ನಿರ್ಮಿಸದೆ ಭಾರಿ ಪ್ರಮಾಣದ ನೀರು ಹಂಚಿಕೆ ಮಾಡಿ ರೂಪಿಸಿದ ಯೋಜನೆ ಇದಾಗಿದೆ. ಶಿವಮೊಗ್ಗ ಜಿಲ್ಲೆಯ ಗಾಜನೂರು ಸಮೀಪದ ತುಂಗಾ ಜಲಾಶಯದ ನೀರನ್ನು ತರೀಕೆರೆ ತಾಲ್ಲೂಕಿನ ಲಕ್ಕವಳ್ಳಿ ಸಮೀಪದ ಭದ್ರಾ ಜಲಾಶಯಕ್ಕೆ ಹರಿಸಲಾಗುತ್ತದೆ.ಅಲ್ಲಿಂದ ನಾಲೆ ಮೂಲಕ ಚಿತ್ರದುರ್ಗ, ಚಿಕ್ಕಮಗಳೂರು, ತುಮಕೂರು ಹಾಗೂ ದಾವಣಗೆರೆ ಜಿಲ್ಲೆಗೆ ನೀರು ಹರಿಸುವುದು ಯೋಜನೆಯ ಉದ್ದೇಶ. ಹನಿ ನೀರಾವರಿ ಮೂಲಕ ನೀರು ಒದಗಿಸುವ ಕರ್ನಾಟಕ ರಾಜ್ಯದ ಬಹುದೊಡ್ಡ ನೀರಾವರಿ ಯೋಜನೆಯಾಗಿ ಇದಾಗಿದೆ.

### ಐದು ದಶಕಗಳ ಬೇಡಿಕೆ

ಭದ್ರಾ ಜಲಾಶಯದ ನೀರನ್ನು ಚಿತ್ರದುರ್ಗಕ್ಕೆ ಹರಿಸಬೇಕು ಎಂಬುದು ದಶಕಗಳ ಕನಸು. ಚಿತ್ರದುರ್ಗದವರೇ ಆದ ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಅವರ ಕಾಲದಿಂದಲೂ ಈ ಪ್ರಯತ್ನ ನಡೆಯುತ್ತಲೇ ಇತ್ತು. ಎರಡೂವರೆ ದಶಕದಿಂದ ಈಚೆಗೆ ಇದು ಚಳವಳಿಯ ರೂಪು ಪಡೆದುಕೊಂಡಿತು. ಕಾಲಾನಂತರ ಇದು ಚುನಾವಣೆಯ ಅಸ್ತ್ರವಾಗಿಯೂ ಮುನ್ನೆಲೆಗೆ ಬಂದಿತು. ಚುನಾವಣೆ ಸಂದರ್ಭದಲ್ಲಿ ಎಲ್ಲ ರಾಜಕೀಯ ಪಕ್ಷಗಳು ಭದ್ರಾ ನೀರು ಹರಿಸುವ ಆಶ್ವಾಸನೆ ನೀಡಿದವು.

ನೀರಾವರಿ ತಜ್ಞ ಕೆ.ಸಿ.ರೆಡ್ಡಿ ಅಧ್ಯಕ್ಷತೆಯಲ್ಲಿ ರಚನೆಗೊಂಡ ಸಮಿತಿ ಅಧ್ಯಯನ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿತು. ಇದಕ್ಕೆ ಒಪ್ಪಿಗೆ ಸೂಚಿಸಿದ ರಾಜ್ಯ ಸರ್ಕಾರ, 2008ರಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ಚಾಲನೆ ನೀಡಿತು. ಭದ್ರಾ ಮೇಲ್ದಂಡೆಗೆ ಮೀಸಲಿಡಲಾಗಿರುವ 29.9 ಟಿಎಂಸಿ ಅಡಿ ನೀರನ್ನು ಕೆರೆ ತುಂಬಿಸುವ ಹಾಗೂ ಹನಿ ನೀರಾವರಿಯಾಗಿ ಹರಿಸುವ ಮಹತ್ತರ ಯೋಜನೆಯಾಗಿ ಇದ ರಾಜ್ಯದಲ್ಲಿ ರೂಪಗೊಂಡಿತು.



### ಎಲ್ಲಿಂದ? ಎಲ್ಲಿವರೆಗೆ ನೀರು?

ಭದ್ರಾ ಅಣೆಕಟ್ಟು ಯೋಜನೆಯ ರೂಪುರೇಷೆಯೇ "ವಿಸ್ಮಯ ಮೂಡಿಸುತ್ತದೆ. ತುಂಗಾ ಜಲಾಶಯದಿಂದ ಪ್ರತಿ ವರ್ಷದ ಜೂನ್ ತಿಂಗಳಿಂದ ಅಕ್ಟೋಬರ್ ವರೆಗೆ 17.4 ಟಿಎಂಸಿ ಅಡಿ ನೀರನ್ನು ಮೇಲೆತ್ತಿ ಭದ್ರಾ ಜಲಾಶಯಕ್ಕೆ ಹರಿಸಲಾಗುತ್ತದೆ. ಭದ್ರಾ ಜಲಾಶಯದ 12.5 ಟಿಎಂಸಿ ಅಡಿ ನೀರು ಸೇರಿಸಿ 'ಭದ್ರಾ ಮೇಲ್ದಂಡೆ'ಗೆ ಹಂಚಿಕೆ ಮಾಡುವ ವ್ಯವಸ್ಥೆಯಾಗಿ – ಇದನ್ನು ರೂಪಿಸಲಾಗಿದೆ.

ಭದ್ರಾ ಜಲಾಶಯದಿಂದ ನಾಲೆಯ ಮೂಲಕ ನೀರು ಹರಿಸಲಾಗುತ್ತದೆ. 11 ಕಿ.ಮೀ ದೂರದಲ್ಲಿರುವ ತರೀಕೆರೆ ತಾಲ್ಲೂಕಿನ ಶಾಂತಿಪುರ ಹಾಗೂ 46 ಕಿ.ಮೀ ದೂರದಲ್ಲಿರುವ ಬೆಟ್ಟದ ತಾವರೆ ಕೆರೆಯಲ್ಲಿ ಪಂಪ್‌ಹೌಸ್ ನಿರ್ಮಿಸಲಾಗಿದೆ. ಎರಡೂ ಕಡೆ ನೀರನ್ನು 45 "ಮೀಟರ್ ಮೇಲೆತ್ತಿ ನಾಲೆಗೆ ಲಿಫ್ಟ್ ಮಾಡಲಾಗುತ್ತದೆ. ಪ್ರತಿ ಪಂಪ್ ಹೌಸ್‌ನಲ್ಲಿ ನಾಲ್ಕು ಮೋಟಾರು ಅಳವಡಿಸಲಾಗಿದೆ. ಪ್ರತಿ ಮೋಟಾರು 750 ಕ್ಯುಸೆಕ್ ನೀರು ಮೇಲೆತ್ತುವ ಸಾಮರ್ಥ್ಯ ಹೊಂದಿದೆ.

### ಏಳು ಕಿಮೀ ಸುರಂಗ

ತರೀಕೆರೆ ತಾಲ್ಲೂಕಿನ ಅಜ್ಜಂಪುರದ ಬಳಿ ಸುಮಾರು ಏಳು ಕಿಮೀ ಉದ್ದದ ಸುರಂಗ ಮಾರ್ಗ ನಿರ್ಮಿಸಲಾಗಿದೆ. ಹೇಮಾವತಿ ನಾಲೆಗೆ ಹೊರತುಪಡಿಸಿದರೆ ಅತಿ ಉದ್ದದ ಸುರಂಗ ನಿರ್ಮಿಸಿದ್ದು ಭದ್ರಾ ಮೇಲ್ದಂಡೆ ಯೋಜನೆಗೆ ಎಂಬ ಹೆಗ್ಗಳಿಕೆ ಇದೆ. ಇದು ರಾಜ್ಯದ ಎರಡನೇ ಅತಿ ದೊಡ್ಡ ನೀರಾವರಿ ಸುರಂಗ ಮಾರ್ಗವಾಗಿದೆ. ಭೂಮಿಯಿಂದ 150 ಅಡಿ ಆಳದಲ್ಲಿ 8 ಮೀಟರ್ ಉದ್ದ ಸುರಂಗ ನಾಲೆ ನಿರ್ಮಾಣಗೊಂಡಿದೆ.

ಬೃಹತ್ ನೀರಾವರಿ ಯೋಜನೆ ಅನುಷ್ಠಾನಕ್ಕೆ ಬರುತ್ತಿದ್ದಂತೆ ತರೀಕರೆ ಭಾಗದಲ್ಲಿ ಹೋರಾಟ ಭುಗಿಲೆದ್ದಿತು. ಸುರಂಗ ನಿರ್ಮಾಣದಿಂದ ಅಂತರ್ಜಲ ಕುಸಿತವಾಗುತ್ತದೆ ಎಂಬ ತಕರಾರು ಎದ್ದಿತು. ತರೀಕೆರೆ ಹಾಗೂ ಕಡೂರು ತಾಲ್ಲೂಕಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಬೇಡಿಕೆ ಮುನ್ನೆಲೆಗೆ ಬಂದಿತು. ಬಳಿಕ 1.47 ಟಿಎಂಸಿ ನೀರನ್ನು ತರೀಕೆರೆಗೆ ಮೀಸಲಿಡಲಾಯಿತು. 20,150 ಹೆಕ್ಟೇರ್ ಜಮೀನಿಗೆ ಹನಿ ನೀರಾವರಿ ಸೌಲಭ್ಯ ಕಲ್ಪಿಸುವ ಹಾಗೂ 79 ಕೆರೆಗಳಿಗೆ ನೀರು ತುಂಬಿಸಲು ಸರ್ಕಾರ ಅನುಮೋದನೆ ನೀಡಿತು

# ‘ಏಡ್ಸ್’ ಸೋಂಕು ತಡೆಗೆ ಜಾಗೃತಿಯ ಮಂತ್ರ

**ವ್ಯ**ಕ್ತಿಯ ಬದುಕಿಗೆ ಪೆಡಂಭೂತವಾಗಿ ಕಾಡುತ್ತಾ, ಜೀವವನ್ನೇ ಆಹುತಿ ತೆಗೆದುಕೊಳ್ಳುವ ಏಡ್ಸ್ ಕುರಿತಾಗಿ ಜನರಲ್ಲಿ ಅರಿವು ಮೂಡಿಸುವುದೇ "ವಿಶ್ವ ಏಡ್ಸ್ ದಿನದ ಪರಮೋಚ್ಚ ಧ್ಯೇಯ. ಹದಿಹರೆಯದವರು ವೃದ್ಧರು ಎಂಬ ಯಾವ ಭೇದವಿಲ್ಲದೆ ಮಾನವನ ದೇಹಕ್ಕೆ ಒಕ್ಕರಿಸಿ ಆರೋಗ್ಯವನ್ನು ಹಿಂಡಿ ಹಿಪ್ಪೆ ಮಾಡಿಬಿಡುತ್ತದೆ ಈ ಮಹಾಮಾರಿ ಏಡ್ಸ್, ಮನುಕುಲದ ನೆಮ್ಮದಿ ಕೆಡಿಸುವ ಏಡ್ಸ್ ಬಗ್ಗೆ ಪ್ರಪಂಚದಾದ್ಯಂತ ಮುಂಜಾಗ್ರತ ಅಭಿಯಾನ ಕೈಗೊಂಡ ಪರಿಣಾಮ ಮೊದಲಿನಷ್ಟು ಅದರ ಕುರುಹು, ಛಾಯೆಗಳು ಇಲ್ಲದಿದ್ದರೂ ಇದು ಜನರನ್ನು ಬಿಟ್ಟು ಹೋಗಿಲ್ಲ ಎಂಬುದು ಮಾತ್ರ ಸತ್ಯ .

**ಹೆಚ್‌ಐವಿಯ ಹಂತಗಳು;** ಸೋಂಕಿಗೆ ಒಳಗಾದಾಗ 2–4 ವಾರಗಳ ನಂತರ ಬಹಳಷ್ಟು ವ್ಯಕ್ತಿಗಳಲ್ಲಿ ಅದರ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ ಮತ್ತು ಕೆಲ ದಿನಗಳಲ್ಲಿ ಅಥವಾ ವಾರಗಳಲ್ಲಿ ಅವುಗಳು ಗುಣವಾಗುತ್ತವೆ. ಆ ಲಕ್ಷಣಗಳು ಸಾಮಾನ್ಯವಾಗಿ ಜ್ವರ ತಲೆನೋವು, ಆಯಾಸ, ಬಾಯಿ ಮತ್ತು ಗಂಟಲಿನಲ್ಲಿ ಹುಣ್ಣುಗಳು, ಚರ್ಮದ ತುರಿಕೆ, ಆದರೆ ಪ್ರಾಥಮಿಕ ಹಂತದಲ್ಲಿ ಯಾವುದೇ ರೋಗ ಲಕ್ಷಣಗಳು ಕಾಣಿಸಿಕೊಳ್ಳುವುದಿಲ್ಲ.

ಈ ಹಂತದಲ್ಲಿ ಏಡ್ಸ್ ಸೋಂಕಿತ ಯಾವುದೇ ನಿರ್ದಿಷ್ಟ ಲಕ್ಷಣಗಳು ಸಾಮಾನ್ಯವಾಗಿ ಕಂಡುಬರುವುದಿಲ್ಲ. ಚಿಕಿತ್ಸೆಯನ್ನು ಪಡೆದ ಸಂದರ್ಭದಲ್ಲಿ ಈ ಹಂತದ ಅವಧಿಯು ಸರಾಸರಿ10 ವರ್ಷಗಳಾಗಿರುತ್ತವೆ.



**ಏಡ್ಸ್** ಹೆಚ್‌ಐವಿ ಸೋಂಕಿನ ಮುಂದುವರೆದ ಅಥವಾ ಕೊನೆಯ ಹಂತವಾಗಿದೆ. ಈ ಹಂತದಲ್ಲಿ ಸಿಡಿ4 ಜೀವ ಕಣಗಳ ಪ್ರಮಾಣವು ಅತೀ ಕಡಿಮೆಯಾಗಿರುತ್ತದೆ ಹಾಗೂ ದೇಹದ ಪ್ರತಿರಕ್ಷಣಾ ವ್ಯವಸ್ಥೆಯು ಬಹಳಷ್ಟು ಪ್ರಮಾಣದಲ್ಲಿ ಹಾಳಾಗಿರುತ್ತದೆ. ಎಚ್‌ಐವಿ ಸೋಂಕಿಗೆ ಒಳಗಾದ ನಂತರ ಬಹಳಷ್ಟು ಲಕ್ಷಣಗಳು ಸುಮಾರು 8–10 ವರ್ಷಗಳ ನಂತರ ಕಾಣಿಸಿಕೊಳ್ಳುತ್ತವೆ. ಅವುಗಳು ಸಾಮಾನ್ಯವಾಗಿ ದೇಹದ ತೂಕದಲ್ಲಿ ಭಾರಿ ಇಳಿಕೆ, ಮತ್ತೆ ಮತ್ತೆ ಮರುಕಳಿಸುವ ಜ್ವರ ಕೆಮ್ಮು, ಮತ್ತು ನಿರಂತರವಾಗಿ ತೀವ್ರ ದಣಿವಾಗುವುದು, ಅತಿಸಾರ, ಬಾಯಲ್ಲಿ ಬಿಳಿ ಮಚ್ಚೆಗಳು ಕಾಣಿಸಿಕೊಳ್ಳುವುದು, ಬಾಯಿ ಹಾಗೂ ಜನನಾಂಗದ ಭಾಗಗಳಲ್ಲಿ ಹುಣ್ಣುಗಳು, ನೆನಪಿನ ಶಕ್ತಿ ಕುಂದುವುದು, ತಲೆನೋವು ಮತ್ತು ತಲೆಸುತ್ತು.

**ಹರಡುವಿಕೆ;** ಹೆಚ್‌ಐವಿ ಸೋಂಕಿತ ವ್ಯಕ್ತಿಯ ಕೆಲ ದೈಹಿಕ ಸ್ರಾವಗಳು ಸೋಂಕು ರಹಿತ ವ್ಯಕ್ತಿಯ ಪೊರೆಯ ಅಥವಾ ಹಾನಿಗೀಡಾದ ಅಥವಾ ಸಂಪರ್ಕಕ್ಕೆ ಬಂದಾಗ ಹರಡಬಹುದಾಗಿದೆ. ದೈಹಿಕ ಸ್ರಾವಗಳೆಂದರೆ ವೀರ್ಯ, ಗುದನಾಳದ ಸ್ರಾವ, ಸೋಂಕಿತ ವ್ಯಕ್ತಿಯೊಂದಿಗೆ ಅಸುರಕ್ಷಿತ ಲೈಂಗಿಕ ಸಂಭೋಗದಲ್ಲಿ ತೊಡಗುವುದರಿಂದ. ಸೋಂಕಿತ ವ್ಯಕ್ತಿ ರಕ್ತವನ್ನು ಪಡೆಯುವುದರಿಂ.ದ ವ್ಯಕ್ತಿಯು ಬಳಸಿದ ಸೂಜಿ, ಸಿರಿಂಜ್, ಸೋಂಕಿತ ತಾಯಿಯಿಂದ ಮಗುವಿಗೆ ಹರಡುತ್ತದೆ.–

ಹೆಚ್‌ಐವಿಯು ಒಂದು ಸಾಂಕ್ರಾಮಿಕ ರೋಗವಾಗಿ ಇದ್ದರೂ ಸಹ ಅದು ನೆಗಡಿ, ದಡಾರ ಮುಂತಾದ ರೋಗಗಳಂತೆ ಗಾಳಿ ನೀರು, ಆಹಾರಗಳ ಮೂಲಕ ಹರಡುವುದಿಲ್ಲ. ಹೆಚ್‌ಐವಿ ಸೋಂಕಿತ ವ್ಯಕ್ತಿಯ ಜೊತೆಗೆ ಹಸ್ತಲಾಘವ ಮಾಡುವ ಮೂಲಕ, ವ್ಯಕ್ತಿಯನ್ನು ಆಲಿಂಗನ ಮಾಡುವುದರ ಮೂಲಕ, ಹೆಚ್‌ಐವಿ ಸೋಂಕಿತ ವ್ಯಕ್ತಿಯು ಬಳಸಿದ ತಟ್ಟೆ–ಲೋಟ ಪಾತ್ರೆಗಳನ್ನು ಬಳಸುವುದರಿಂದ. ಹೆಚ್‌ಐವಿ ಸೋಂಕಿತ ವ್ಯಕ್ತಿಯೊಂದಿಗೆ ಆಹಾರ ಸೇವಿಸುವುದರಿಂದ. ಸೊಳ್ಳೆ ಅಥವಾ ಇತರೆ ಕೀಟಗಳ ಕಡಿತದಿಂದ ಹರಡುವುದಿಲ್ಲ.

**ರೋಗನಿರ್ಣಯ;** ರಕ್ತದ ಮಾದರಿಯಲ್ಲಿ ಹೆಚ್ ಐ ವಿ ಗಳನ್ನು ಪತ್ತೆ ಹಚ್ಚುವ ಮೂಲಕ ಸಂಬಂಧಿಸಿದ ವ್ಯಕ್ತಿಗೆ ಹೆಚ್‌ಐವಿ ಸೋಂಕು ತಗುಲಿದೆಯೇ ಅಥವಾ ಇಲ್ಲವೇ ಎಂದು ನಿರ್ಧರಿಸಲಾಗುತ್ತದೆ. ಆದರೆ ವ್ಯಕ್ತಿಯು ಇತ್ತೀಚಿಗಷ್ಟೇ ಸೋಂಕಿಗೆ ಒಳಗಾಗಿದ್ದರೆ (ಸಾಮಾನ್ಯವಾಗಿ ಸೋಂಕಿಗೆ ಒಳಗಾದ ಒಂದು ತಿಂಗಳಿಂದ ಆರು ತಿಂಗಳ ಒಳಗೆ )ಹೆಚ್‌ಐವಿ ಪ್ರತಿಕಾಯಗಳು ಪತ್ತೆಯಾಗದೆ ಇರಬಹುದು. ಈ ಕಾಲಾವಧಿಯನ್ನು "ಎಂಡೋ ಪಿರಿಯೆಡ್ ಎನ್ನಲಾಗುತ್ತದೆ . ಅಂತಹ ಸಂದರ್ಭದಲ್ಲಿ ಎಹೆಚ್ ಐ ವಿ ಯ ಅನುವಂಶೀಯ ಪದಾರ್ಥವನ್ನು ಪತ್ತೆಹಚ್ಚುವ ಪರೀಕ್ಷೆಯನ್ನು ನಡೆಸಬಹುದು.

ಪ್ರಸ್ತುತ ಹೆಚ್‌ಐವಿ ಸೋಂಕನ್ನು ವಾಸಿಮಾಡಲು ಔಷಧಿಗಳಾಗಲಿ ಅಥವಾ ಹೆಚ್‌ಐವಿ ಸೋಂಕನ್ನು ಬಾರದಂತೆ ತಡೆಗಟ್ಟಲು ಲಸಿಕೆ ಯಾಗಲಿ ಲಭ್ಯವಿಲ್ಲ. ಹಾಗಾಗಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ಮೂಲಕ ಅದನ್ನು ಬಾರದಂತೆ ಕಟ್ಟುವುದುದೊಂದೇ ಸದ್ಯಕ್ಕೆ ಇರುವ ಎಕೈಕ ಪರಿಹಾರವಾಗಿದೆ.

**ಚಿಕಿತ್ಸೆ;** ಗುಣಮುಖರಾಗಲು ಕೂಡ ಸಾರ್ವಜನಿಕವಾಗಿ ಔಷಧಿ ಸದ್ಯಕ್ಕೆ ಲಭ್ಯವಿಲ್ಲ. ಎಲ್ಲರಿಗೂ ತಿಳಿದಿರುವ ವಿಧಾನಗಳೆಂದರೆ ವೈರಸ್ ಗಳ ಸಂಪರ್ಕಕ್ಕೆ ಬರದಂತೆ ಮುನ್ನೆಚ್ಚರಿಕೆ ವಹಿಸುವುದು ಅಥವಾ ಇದರಲ್ಲಿ ವಿಫಲರಾದಲ್ಲಿ ಸೋಂಕಿಗೊಳಗಾದ ತಕ್ಷಣವೇ ರೋಗ ನಿರೋಧಕ ಚಿಕಿತ್ಸೆಯಾದ ಆ ಚಿ ಟಿ ರೆಟ್ರೋ ವೈರಲ್ ಚಿಕಿತ್ಸೆಯನ್ನು ಪಡೆಯುವುದು ಉತ್ತಮ ಕ್ರಮವಾಗಿದೆ.

## 2021ಕ್ಕೆ ಜಿಯೊ 5ಜಿ ಸೇವೆ

2021ರ ದ್ವಿತೀಯಾರ್ಧದಲ್ಲಿ 5ಜಿ ಸೇವೆ ಆರಂಭಿಸಲು ರಿಲಯನ್ಸ್ ಜಿಯೋ ಚಿಂತನೆ ನಡೆಸಿದೆ ಎಂದು ರಿಲಯನ್ಸ್ ಇಂಡಸ್ಟ್ರೀಸ್ ಅಧ್ಯಕ್ಷ ಮುಕೇಶ್ ಅಂಬಾನಿ ಹೇಳಿದ್ದಾರೆ. ನವದೆಹಲಿಯಲ್ಲಿ ನಡೆದ ‘ಇಂಡಿಯಾ ಮೊಬೈಲ್ ಕಾಂಗ್ರೆಸ್’ ನಲ್ಲಿ ಮಾತನಾಡಿದ ಅವರು, 5ಜಿ ಸೇವೆಯನ್ನು ಕೈಗೆಟಕುವ ದರದಲ್ಲಿ ಎಲ್ಲೆಡೆ ಬೇಗನೆ ಲಭ್ಯವಾಗುವಂತೆ ಮಾಡಲು ನೀತಿ ರೂಪಿಸುವ ಅಗತ್ಯವಿದೆ. ಭಾರತದಲ್ಲಿ 5ಜಿ ಕ್ರಾಂತಿ ಮಾಡುವಲ್ಲಿ ಜಿಯೊ ಮೊದಲಿಗನಾಗಲಿದೆ ಎಂದು ಭರವಸೆ ನೀಡುತ್ತೇನೆ. ದೇಶೀಯವಾಗಿ ಅಭಿವೃದ್ಧಿ ಪಡಿಸಿದ ನೆಟ್ವರ್ಕ್, ಹಾರ್ಡ್‌ವೇರ್ ಮತ್ತು ತಂತ್ರಜ್ಞಾನ ಘಟಕಗಳ ನೆರವಿನೊಂದಿಗೆ ಇದು ಸಾಧ್ಯವಾಗಲಿದೆ. ಜಿಯೊ 5ಜಿ ಸೇವೆಯು ಆತ್ಮನಿರ್ಭರ ಭಾರತದ ಸ್ಫೂರ್ತಿಗೆ ಸಾಕ್ಷಿಯಾಗಲಿದೆ ಎಂದು ಅಂಬಾನಿ ಹೇಳಿದ್ದಾರೆ. 5 ಸಾವಿರ ರೂ.ಗಿಂತ ಕಡಿಮೆ ದರದ 5ಜಿ ಸೌಲಭ್ಯದ ಪೋನ್ ಬಿಡುಗಡೆಯ ಆಲೋಚನೆ ಇದೆ ಎಂದರು.


**ಸಂಪಾದಕರು**
ಪ್ರೊ. ನರಂಜನ.
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
**ಆಧ್ಯಾಪಕ ಸಲಹೆಗಾರರು**
ಡಾ. ಗೌತಮ್ ದೇವನೂರು. ಪಿ
ಅಥಿತಿ ಉಪನ್ಯಾಸಕರು

**ವಿದ್ಯಾರ್ಥಿ ಸಂಪಾದಕರು**
ರಶ್ಮಿ ಎಂ.
ರಾಘವೇಂದ್ರ ಅಭಿಷೇಕ್ ಡಿ.
ರಶ್ಮಿ ಎಂ.
**ಪುಟ ವಿನ್ಯಾಸ**
ರಶ್ಮಿ ಎಂ

## ಅಪರಾಧ ಲೋಕದ ಅನಾವರಣ: ಪಾಪ್ ಕಾರ್ನ್ ಮಂಕಿ ಟೈಗರ್

ತಮ್ಮದೇ ಆದ ನಿರೂಪಣೆ ಶೈಲಿಯಿಂದಾಗಿ ಗಮನ ಸೆಳೆಯುವ ನಿರ್ದೇಶಕ ದುನಿಯಾ ಸೂರಿ ವಿಶೇಷವಾದ ಕಥೆಗಳನ್ನು ಆಯ್ದುಕೊಂಡು ಪ್ರತೀ ಬಾರಿಯೂ ಅಚ್ಚರಿ ಮೂಡಿಸುತ್ತಾರೆ. ಅವರ ಫ್ಲೇವರ್‌ನ ಸಿನಮಾಗಳನ್ನು ಬಯಸುವ ಪ್ರೇಕ್ಷಕರಿಗೆ 'ಪಾಪ್‌ಕಾರ್ನ್ ಮಂಕಿ ಟೈಗರ್'ಸ ಚಿತ್ರ ಹೇಳಿ ಮಾಡಿಸಿದಂತಿದೆ. ಪಕ್ಕ ರಗಡ್ ಆದಂತಹ ಒಂದು ಕಥೆಯನ್ನು ಈ ಬಾರಿಯು ಅಷ್ಟೇ ರಗಡ್ ಆಗಿ ಅವರು ಕಟ್ಟಿಕೊಟ್ಟಿದ್ದಾರೆ. ಭೂಗತ ಲೋಕ ಅಥವಾ ಅಪರಾಧ ಹಿನ್ನಲೆಯ ಘಟನೆಗಳನ್ನು ಇಟ್ಟುಕೊಂಡು, ಅದನ್ನು ರೋಚಕವಾಗಿ ತೆರೆಗೆ ತರುವುದು ಸೂರಿ ವಿಶೇಷತೆ. ಅದು ಪಾಪ್‌ಕಾರ್ನ್ ಮಂಕಿ ಟೈಗರ್ ಚಿತ್ರದಲ್ಲಿ ಮುಂದುವರೆದಿದೆ. ಈ ಹಿಂದೆ ತಮ್ಮದೇ ನಿರ್ದೇಶನದ ಟಗರು ಸಿನಮಾಗೆ ಬಳಸಿದ್ದ ನಿರೂಪಣಾ ತಂತ್ರವನ್ನೇ ಈ ಚಿತ್ರಕ್ಕೂ ಸೂರಿ ಬಳಸಿದ್ದಾರೆ. ಕಥೆ ಆಗಾಗ ಹಿಂದಕ್ಕೆ ಮುಂದಕ್ಕೆ ಸಾಗುತ್ತಲೇ ಇರುತ್ತದೆ. ಅದೇ ಕೆಲವೊಮ್ಮೆ ಸಿನಮಾಕ್ಕೆ ಪ್ಲಸ್ ಮತ್ತು ಮೈನಸ್ಸು. ರಕ್ತಪಾತ, ಮದ್ಯಪಾನ, ಧೂಮಪಾನವಂತೂ ಅತೀ ಎನಿಸುವಷ್ಟು ಇದೆ.

ಬೈಗುಳಗಳ ಮಾತುಗಳು ಅಷ್ಟೇ ಸಲೀಸಾಗಿ ಪಾತ್ರಗಳ ಬಾಯಲ್ಲಿ ಹೊರಡುತ್ತವೆ. ಹಾಗಾಗಿ, ಫ್ಯಾಮಿಲಿ ಪ್ರೇಕ್ಷರಿಗೆ ಇದು ಇಷ್ಟವಾಗುವುದು ಅನುಮಾನ! ಕಥೆಯಲ್ಲಿ ಸಾಕಷ್ಟು ಟ್ವಿಸ್ಟ್‌ಗಳನ್ನು ಸೂರಿ ನೀಡಿದ್ದಾರೆ. ಕ್ರೈಮ್ ಲೋಕದ ವೈಭವಿಕರಣಕ್ಕೆ ಅವರು ಹೆಚ್ಚು ಒತ್ತು ಕೊಟ್ಟಿದ್ದಾರೆ. ಮೊದಲರ್ಧ ವೇಗದ ಚಿತ್ರಕಥೆಯ ಕಾರಣದಿಂದ ಪ್ರೇಕ್ಷಕರನ್ನು ಈ ಸಿನಿಮಾ ಆಕರ್ಷಿಸುತ್ತದೆ. ದ್ವಿತೀಯಾರ್ಧ ಕೊಂಚ ನಿಧಾನಗತಿಯಿಂದ ಕೂಡಿದೆ. ಚರಣ್‌ರಾಜ್ ಸಂಗೀತ ಬರಿ ಹಿನ್ನಲೆ ಸಂಗೀತಕಷ್ಟೇ ಸಿಮಿತವಾಗಿದ್ದು, ಕಥೆಗೆ




ಆಪ್ತವಾಗಿ ಮೂಡಿಬಂದಿದೆ. ಶೇಕರ್ ಅವರ ಗುಣಮಟ್ಟದ ಛಾಯಾಗ್ರಹಣದಿಂದಾಗಿ ಪಾಪ್‌ಕಾನ್ ಮಂಕಿ ಟೈಗರ್ ಸಿನಮಾದ ಶ್ರೀಮಂತಿಕೆ ಹೆಚ್ಚಿದೆ.

ಟಗರು ಸಿನಿಮಾದಲ್ಲಿ ಡಾಲಿ ಎಂಬ ಪಾತ್ರದ ಮೂಲಕ ನಟ ಧನಂಜಯ ಮೋಡಿ ಮಾಡಿದ್ದರು. ಅಂತದ್ದೊಂದು ಡಿಫರೆಂಟ್ ಪಾತ್ರವನ್ನು ಸೃಷ್ಟಿಸಿದ್ದ ಸೂರಿ, ಈಗಲೂ ಧನಂಜಾಯಗೆ ಖಡಕ್ ಪಾತ್ರವನ್ನೆ ನೀಡಿದ್ದಾರೆ. ಮಂಕಿ ಸೀನ ಮತ್ತು ಟೈಗರ್ ಸೀನ ಎಂಬ ಎರಡು ಭಿನ್ನ ಶೇಡ್‌ನಲ್ಲಿ ಧನಂಜಯ ಕಾಣಿಸಿಕೊಂಡಿದ್ದಾರೆ. ಅವರ ಅಭಿನಯಕ್ಕೆ ಇಲ್ಲಿ ಹೆಚ್ಚು ಸ್ಕೋಪ್ ಸಿಕ್ಕಿದೆ. ತುಂಬ ನೈಜ ಅಭಿನಯದಿಂದಾಗಿ ಅವರು ಪ್ರೇಕ್ಷಕರಿಗೆ ಇನ್ನಷ್ಟು ಹತ್ತಿರವಾಗಿದ್ದಾರೆ. ಸೀನನ ಪಾತ್ರಕ್ಕೆ ಸಂಪೂರ್ಣವಾಗಿ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಾರೆ ಧನಂಜಯ. ಮೆಕಾನಿಕ್ ಆಗಿದ್ದ ಹುಡುಗನೊಬ್ಬ ರೌಡಿಸಂಗೆ ಇಳಿಯುವ, ನಂತರ ಸಂಬಂಧಗಳ ಸಂಕೋಲೆಯಲ್ಲಿ ಸಿಲುಕಿಕೊಳ್ಳುವ ಪಾತ್ರದಲ್ಲಿ ಧನಂಜಯ ನೈಜವಾಗಿ ಕಾಣಿಸಿಕೊಂಡಿದ್ದಾರೆ. ಆದರೆ, ಕೆಲ ರಕ್ತಪಾತದ ದೃಶ್ಯಗಳಲ್ಲಿ ಮತ್ತೊಮ್ಮೆ ತಮ್ಮ ರೌದ್ರಾವತಾರವನ್ನು ಮೆರೆದಿದ್ದಾರೆ!

ದೇವಿಕ ಪಾತ್ರಕ್ಕೆ ಎರಡು ಶೇಡ್‌ನಲ್ಲಿ ಜೀವ ತುಂಬಿದ್ದಾರೆ ನಿವೇದಿತಾ. ಸುಮಿತ್ರಾ ಪಾತ್ರಕ್ಕೆ ಅಮೃತಾ ಅಯ್ಯಂಗಾರ್ ಸೂಕ್ತ ಆಯ್ಕೆ. ಗಿರಿಜಾ ಪಾತ್ರದ ಮೂಲಕ ನವನಟಿ ಸಪ್ತಮಿ ಅಚ್ಚರಿ ಮೂಡಿಸುತ್ತಾರೆ. ಅದೇ ರೀತಿ ಈ ಸಿನಿಮಾದಲ್ಲಿ ಸಾಕಷ್ಟು ಹೊಸ ಕಲಾವಿದರು ಬಣ್ಣ ಹಚ್ಚಿದ್ದಾರೆ. ವಿಜಯ್‌ಕುಮಾರ್, ಗೌತಮ್ ಸೇರಿದಂತೆ ಅನೇಕರು ಅವರವರ ಪಾತ್ರಗಳನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ. ಸ್ಪರ್ಶ ರೇಖಾ, ಕಾಕ್ರೋಚ್ ಸುಧೀ, ನಾಯಕ ನವೀನ್, ಪೂರ್ಣಚಂದ್ರ ಮೈಸೂರು, ಪ್ರಶಾಂತ್ ಸಿದ್ಧಿ ನೆನಪಲ್ಲುಳಿಯುವಂತೆ ನಟನೆ ಮಾಡಿದ್ದಾರೆ. ವಿಶೇಷವೆಂದರೆ, ಈ ಸಿನಿಮಾವು ಸೂರಿ ನಿರ್ದೇಶನದಲ್ಲಿ ತೆರೆಕಂಡ ಕೆಂಡಸಂಪಿಗೆ ಮತ್ತು ಮುಂದೆ ತೆರೆ ಕಾಣಬೇಕಿರುವ ಕಾಗೆ ಬಂಗಾರ ಚಿತ್ರಕ್ಕೆ ಲಿಂಕ್ ಆಗಿದೆ. ಅದು ಹೇಗೆ? ಅದನ್ನು ಸಿನಿಮಾದಲ್ಲಿ ನೋಡಿದರೇನೆ ಮಜ ಇರುತ್ತದೆ. ಅದ್ದರಿಂದ ಮೂವಿ ಲಿಕ್ ಆಗುವುದನ್ನ ಪ್ರೊತ್ಸಹಿಸದಿರಿ.

## ಸ್ವ ಗೃಹದಲ್ಲಿ ಕನ್ನಡ ಪುಸ್ತಕಗಳ ಗ್ರಂಥಾಲಯ

ಕನ್ನಡವೆಂದೊಡನೆಯೆ ಮೂಗುಮುರಿಯುವ ಜನರ ನಡುವೆ ಇಲ್ಲೋಂದು ಅಪರೂಪದ ದಂಪತಿಗಳು ತಮ್ಮ ಬದುಕಿನ್ನೂದ್ದಕ್ಕೂ ಕನ್ನಡದ ಬಗ್ಗೆ ಒಲವು ಬೆಳೆಸಿಕೊಂಡು, ಈಗಿನ ಯುವ ಪೀಳಿಗೆಯ ಮನಸಿನಲ್ಲು ಕನ್ನಡದ ಬಗ್ಗೆ ಪ್ರೀತಿಯ ಬೀಜವ ಬಿತ್ತುವ ಕಾರ್ಯಕ್ಕೆ ಮುಂದಾಗಿರುವುದು ನಿಜಕೂ ವಿಷೇಶ ಉನ್ನತ ಶಿಕ್ಷಣದಲ್ಲಿ ಐಚ್ಚಿಕ ಕನ್ನಡವನ್ನು ಮುಖ್ಯ ವಿಷಯವಾಗಿ ತೆಗೆದುಕೊಂಡು, ಪದವಿ ಮುಗಿದ ನಂತರ ವೃತಿ ಬದುಕಿಗೆ ಪೂರಕವಾಗುವಂತೆ ತಮ್ಮ ಸ್ನಾತ್ತಕೊತ್ತರ ಪದವಿಯಲ್ಲೂ ಕನ್ನಡವನ್ನೆ ತಮ್ಮ ನತ್ಯ ಸಂಗಾತಿಯಂತೆ ಭಾವಿಸಿ ಆ ವಿಷಯದಲ್ಲೇ ಪಿ ಜಿ ಮುಗಿಸಿ ಮುಂದೆ ಶಿಕ್ಷಣ ವೃತಿಯನ್ನು ಆಯ್ಕೆ ಮಾಡಿಕೊಂಡರು,



ಸದ್ಯಕ್ಕೆ ಮೈಸುರಿನ ಪ್ರತಿಷ್ಟಿತ ಕಾಲೇಜಿಗಳಲ್ಲಿ ಒಂದಾದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಆಧ್ಯಾಪಕರಾಗಿ ಕಾರ್ಯ ನರ್ವಹಿಸುತಿದ್ದಾರೆ, ಮೂಲತಃ ಹಾಸನ ಜಿಲ್ಲೆಯುವರಾದ ಈ ದಂಪತಿಯು ನಾಮದೇಯ ಶ್ರೀಯುತ ತಿಮ್ಮೇಗೌಡ ಹಾಗೂ ಶ್ರೀಮತಿ ಜೈ ಕುಮಾರಿ. ಇವರ ಗ್ರಂಥ ಸಂಗ್ರಹಾಲಯದಲ್ಲಿ ಸುಮಾರು 500 ಕ್ಕೂ ಹೆಚ್ಚು ಕನ್ನಡ ಪುಸ್ತಕಗಳ ಸಂಗ್ರಹವಿದೆ ಹಾಗೂ ಕನ್ನಡ ಸಾಹಿತ್ಯಕ್ಕೆ ಮುಕುಟ ಮಣಿಗಳಾಗಿರುವ ಕವಿಗಳು ದಾಸ ಸಂತರು ವಚನಕಾರರು ರಚಿಸಿರುವ ಹಲವು ರಚನೆಗಳು ಇವರ ಸ್ವ ಗೃಹ ಗ್ರಂಥಾಲಯದ ಬುತ್ತಿಯಲ್ಲಿ ಇವೆ.

ಕುವೆಂಪು, ದಾ ರ ಬೇಂದ್ರೆ, ಡಿವಿಜಿ, ದೇವನೂರು ಮಹದೇವ, ನಿಶಾರ್ ಅಹಮದ್ದ್, ವಿ ಕೃ ಗೋಕಾಕ್ ವೈದೇಹಿ, ಶಿವರಾಮ ಕಾರಂತರು, ಶಿವರಾಮ ಕಾಡನ ಕುಪ್ಪೆ, ಚಂದ್ರಶೇಖರ ಕಂಬಾರ, ಎಸ್ ಎಲ್ ಬೈರಪ್ಪ, ಮಾಸ್ತಿ ವೆಂಕಟೇಶ್ ಆಯ್ಯಂಗರ್, ಬಿ ಎಂ ಶ್ರೀ, ಬೀಚಿ, ಪುರ್ಣಚಂದ್ರ ತೇಜಶ್ವಿ, ಗೀರಿಶ್ ಕಾರ್ನಾಡ್, ಪಂಪ, ರನ್ನ ಪೊನ್ನ, ಷಡಕ್ಷರಿ ಜನ್ನ, ಕುಮಾರವ್ಯಾಸ ಹೀಗೆ ಇನ್ನು ಕನ್ನಡದ ಹಳೆಗನ್ನಡ, ನಡುಗನ್ನಡ, ಹೊಸಗನ್ನಡ, ನವೋದಯ ಸಾಹಿತ್ಯದ ಎಲ್ಲಾ ರಚನೆಗಳು ಇವರ ಗ್ರಂಥಾಲಯದಲ್ಲಿ ಸಂಗ್ರಹವಾಗಿದೆ ಇವುಗಳ ಜೊತೆಗೆ ಬಸವಣ್ಣ, ಅಕ್ಕಮಹಾದೇವಿ, ಅಲ್ಲಮ ಪ್ರಭು, ಘಟ್ಟಿವಾಳ್ಳಯ್ಯ ರವರ ವಚನ ಸಾಹಿತ್ಯ ಭಂಡವಿದೆ. ದಾಸ ಸಂತರ ಭಕ್ತಿಸುಧೆಯ ಭಂಢರವಿದೆ.

ಈ ಗ್ರಂಥ ಸಮೂಹದ ಒಂದೊಂದು ಪುಸ್ತಕವು ಅವರ ಸಾಹಿತ್ಯದೆಡೆಗಿನ ಒಲವನ್ನು ತೋರಿಸಲು ಸಾಕ್ಷಿಯಾಗಿದೆ ಈ ಪಯಣ ಸದ್ದಿಲ್ಲದೆ ಸಾಗುತ್ತಿದೆ

## ಜಗ ಕಂಡ ದೈವ

ಯಾರವಳು ಕ್ಷಮಯಾದರಿತ್ರಿ,
ಯಾಕಾದವಳು ಇಷ್ಟು
ಸಹನಾಮೂರ್ತಿ, ತನ್ನಾತ್ಮಗೌರವಕ್ಕೆ
ಪೆಟ್ಟಾದರು, ತನ್ನವರಿಗಾಗೆ ಜೀವನ
ಮೀಸಲಿಡುವಳು.

ನೋವಿರಲಿ ನಲಿವಿರಲಿ ಕೈಹಿಡಿದು
ನಡೆಸುವಳು, ತನ್ನಾಸೆಯನ್ನೆಲ್ಲ
ಬದಿಗಿಟ್ಟು ಪರರಿಗಾಗೆ
ಬದುಕುವಳು, ಮರುಭೂಮಿಯ
ಓಯಾಸಿಸ್ ಅವಳು,
ಸುಡುಬಿಸಿಲಿನಲ್ಲೂ
ತಂಪುಣಿಸುವಳು.

ನಲಿವಲ್ಲಿ ಬೋರ್ಗರೆವಳು,
ನೋವಲ್ಲಿ
ಮಂದಗಾಮಿನಯಾಗುವಳು,
ಸಾಗರಕ್ಕಿಂತ ವಿಶಾಲ ಹೃದಯ
ಹೊಂದಿಹಳು, ಕೊಂಚವು
ಕಲ್ಮಶವಿಲ್ಲದ ಮನದವಳು.

ಬಿಸಿಲಲ್ಲಿ ನೆರಳಾಗುವಳು,
ಮಳೆಯಲ್ಲಿ ಕೊಡೆಯಾಗುವಳು,
ಋತು ಬದಲಾದರು
ಬದಲಾಗದವಳು, ಎಲ್ಲಾ
ಸಮಯದಲ್ಲೂ ಕರುಣೆ
ಹೊಂದಿಹಳು.



ಮುಖದಲ್ಲಿ ಮುಂಗೋಪ
ಹೊಂದಿಹಳು, ಆದರೂ
ಮಗುವಿನಂತ ಮನಸವಳು, ಎಂತಹ
ಕಷ್ಟ ಬಂದರು ಕುಗ್ಗದವಳು,
ಸೋಲಲ್ಲಿ ತನ್ನವರಿಗಾಗಿ ಎದ್ದು
ನಿಲ್ಲುವಳು.

ಯಾರವಳು? ಎಲ್ಲಿಯವಳು?
ಹೇಳಬೇಕೆಂದರೆ ತನ್ನ ಅಸ್ತಿತ್ವವನ್ನು
ಪರರಲ್ಲೆ ಕಾಣುವವಳು, ಇಷ್ಟೆಲ್ಲಾ
ಇರುವುದಕ್ಕೆ ಅವಳು ತಾಯಾದಳು,
ಜಗಕ್ಕೆಲ್ಲಾ ದೇವರಾದಳು..

## ಅತೀತ: ಎಸ್. ಎನ್ ಸೇತುರಾಮ್

ಎಸ್ .ಎನ್ ಸೇತುರಾಮ್ ಅವರ ರಚನೆ ಮತ್ತು ನರ್ದೇಶನದಲ್ಲಿ ಮೂಡಿಬಂದ ಒಂದು ಅಪೂರ್ವ ನಾಟಕ ಅತೀತ. ಅತೀತ ಎಂಬುದರ ಅರ್ಥ ಕ್ರಮತಪ್ಪಿದ ನಡತೆ ಅತವಾ ಮೀರಿದ ಎಂದು. ಕ್ರಮ ತಪ್ಪಿರುವುದಾದರೂ ಯಾವುದು? ಸಾಮಾಜಿಕ ಮೌಲ್ಯಗಳೊ? ಸಮಾಜದ ಸಮತೋಲನವೋ? ಎಲ್ಲಾ ಪ್ರಶ್ನೆಗಳ ಹಾದು ಹೋಗುವ, ತಕ್ಕ ಮಟ್ಟಿಗೆ ಅದರ ಉತ್ತರ ಕೊಡುವ ನಾಟಕ ಅತೀತ. ನಾವು ನೋಡುವ , ನಾವು ಬಯಸುವ , ನಮ್ಮನ್ನು ಹಾಡಿ ಹೊಗುಳುವ ಜಗತ್ತು ಬಹಳ ಸುಂದರ. ಸಾಧನೆಯ ಶಿಖರ ನಮ್ಮ ಗುರಿ. ನಮ್ಮನ್ನು ನಾವು ಹೋಲಿಸಿಕೊಂಡು, ಮೌಲ್ಯಮಾಪನ ಮಾಡಲು ಸಾಧಕರನ್ನು ಬಳಸಿಕೊಳ್ಳುವುದುಂಟು. ಪ್ರತಿಯೊಬ್ಬರ ಸುಂದರ ಮೊಗದ ಆಚೆಬದಿಯಲ್ಲಿ ಒಂದು ಕರಾಳವಾದ , ವಿಕಾರವಾದ ಮುಖ ಇರುತ್ತದೆ. ಅದನ್ನು ನಾವು ಗಮನಸುವುದಿಲ್ಲ ಎಂದು ನಾಟಕ ಪದೇ ಪದೇ ನರೂಪಿಸುತ್ತದೆ: ದೇಹ–ಆತ್ಮ ವಿಂಗಡನೆ, ದೇಹದ ಪರಿಶುದ್ಧ ಇಮೇಜ್ ಕೆಸರುಮಯವಾದ ಆತ್ಮದ ಚಿತ್ರಣ, ಸುಳ್ಳಿನ ಸುಂದರ ಸವಿ, ಸತ್ಯದ ಕಟು ಕಹಿ ಸ್ವಾರ್ಥದ ಹುನ್ನಾರಗಳು,




ಜೀವ–ಜೀವನಕ್ಕೆ ಹಪಹಪಿಸುವ , ಸಮಯೋಚಿತ ಮಾತುಗಳು– ಇವುಗಳು ನಾಟಕದ ವೈಶಿಷ್ಯತೆಗಳು. ಸೇತುರಾಮ್ ಎಂದ ಮೇಲೆ ಸಮಾಜ ವಿಡಂಬನೆ, ವ್ಯಂಗ್ಯೋಕ್ತಿಗಳು ಸಹಜ. ಇನ್ನು ನಟನೆಯ ವಿಚಾರಕ್ಕೆ ಬಂದರೆ , ಎಲ್ಲರ ನಟನೆ ಅದ್ಭುತ. ಪ್ರತಿಯೊಬ್ಬರ ಹಾವ–ಭಾವ ಮಾತಿನ ಶೈಲಿ, ವರ್ಣನೆಗೆ ನಿಲುಕದ್ದು . ನಟನೆ ಎನ್ನುವುದಕ್ಕಿಂತ ಅದು ಸಹಜತೆ ಎನ್ನುವಷ್ಟೂ ನಮ್ಮನ್ನು ಆಕರ್ಷಿಸುತ್ತಾರೆ, ಆ ಎಲ್ಲ ನಟರು. ನಾಯಕನ ಸಮರ್ಥನಾ ತಾಕತ್ತು ಮತ್ತು ವಿಷಯ ತಿರುಚುವ ಸಾಮರ್ಥ್ಯಕ್ಕೆ ಯಾರೇ ಆದರೂ ಬೆರಗುಗೊಳ್ಳುವುದು ಖಂಡಿತ. ಆದರೆ ನಾಟಕ ನೋಡುವಾಗ ಕೆಲವು ದೃಶ್ಯಗಳ ವರ್ಣನೆ ನಮ್ಮ ಮನಸ್ಸಿಗೆ ನೋವನ್ನು ಉಂಟು ಮಾಡುತ್ತದೆ.ಕೆಲ ದೃಶ್ಯಗಳನ್ನು ನಟರು ವರ್ಣಿಸುವಾಗ ಇದನ್ನು ಕೆಳಲಾರೆ ಸಹ ಎನಸುವುದು ಸಹ ಉಂಟು. ಹೆಣ್ಣಿನ ಮೇಲೆ ಆಕ್ರಮಣಗಳನ್ನು ಕಠೋರವಾಗಿ ತೋರಿಸಿದ್ದಾರೆ ಎಂದು ಅನಸುವುದುಂಟು.

ಈ ಕೆಲ ಅಂಶಗಳನ್ನು ಹೊರತು ಪಡಿಸಿ, ನಾಟಕ ಅದ್ಭುತವೇ ಹೌದು. ಸಮಾಜ ವಿಮರ್ಶೆಗೆ ಇದೊಂದು ಒಳ್ಳೆಯ ನಾಟಕ. ಎಲ್ಲರಿಗೂ ನಾಟಕ ಹಿಡಿಸುವುದು ಎಂದು ಹೇಳುವುದು ಕಷ್ಟವಾದರೂ , ಅವರ ನಟನೆಗೆ ಮನಸೋಲುವುದು ಅನುಮಾನ ರಹಿತವಾದದ್ದು. , ಆಸಕ್ತಿವುಳ್ಳವರು ಖಂಡಿತ 'ಅತೀತ ' ನೋಡಲೇಬೇಕು.